ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ

ದಿನಾಂಕ : DATE : 20/07/2019

# ನನ್ನ ವಿರುದ್ಧ ಆರೋಪಿಸುವವರು ಹೊಟ್ಟೆಗೇನ್ ತಿಂತಾರೆ?: ಸ್ಪೀಕರ್

## ಕಲಾಪ ಮುಂದೂಡಲು 12 ಕೋಟಿ ತಗೋತೀನಂತೆ: ಕಿಡಿ

## ನಿಮ್ಮ ಹೊಲಸು ವ್ಯಾಪಾರದ ದರಿದ್ರಕ್ಕೆ ನಮ್ಮನ್ನೇಕೆ ಸಾಯಿಸ್ತೀರಿ?

ವಿಧಾನಸಭೆ: 'ಮುಖ್ಯಮಂತ್ರಿಗಳ ವಿಶ್ವಾಸಮತ ಯಾಚನೆ ನಿರ್ಣಯವನ್ನು ಮತಕ್ಕೆ ಹಾಕಲು ನಾನು ಅನಗತ್ಯ ವಿಳಂಬ ಮಾಡುತ್ತಿದ್ದೇನೆ. ಒಂದು ದಿನ ಕಲಾಪ ಮುಂದೂಡಿದರೆ 12 ಕೋಟಿ ರು. ಹಣ ಪಡೆಯುತ್ತಿದ್ದೇನೆ ಎಂಬ ಆರೋಪಗಳನ್ನು ನನ್ನ ಮೇಲೆ ಮಾಡಲಾಗುತ್ತಿದೆ. ದೊಡ್ಡ ನಾಯಕರೇ ಇಂತಹ ವ್ಯಾಖ್ಯಾನ ಮಾಡುತ್ತಿದ್ದಾರೆ. ಈ ದೊಡ್ಡ ಜನ ಹೊಟ್ಟೆಗೆ ಏನು ತಿಂತಾರೆ? ನೀವು ಆ ರೀತಿ ಬದುಕುವುದಲ್ಲದೇ ನಮ್ಮನ್ನು ಏಕೆ ಆರೋಪಿ ಸ್ಥಾನದಲ್ಲಿ ಕೂರಿಸುತ್ತೀರಿ.'



ವಿಶ್ವಾಸ ಮತ ನಿರ್ಣಯಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆಗೆ ಅವಕಾಶ ನೀಡಿದ್ದಾರೆ ಎಂದು ಆರೋಪ ಮಾಡುತ್ತಿರುವವರ ವಿರುದ್ಧ ವಿಧಾನಸಭೆ ಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಶುಕ್ರವಾರ ಕೆಂಡಕಾರಿದ ರೀತಿಯಿದು.

ಶುಕ್ರವಾರ ವಿಧಾನಸಭೆ ಕಲಾಪ ಶುರುವಾದ ತಕ್ಷಣ ಮಾತು ಆರಂಭಿಸಿದ ರಮೇಶ್ ಕುಮಾರ್ ತಮ್ಮ ವಿರುದ್ಧ ಮಾಡಲಾಗುತ್ತಿರುವ ಆರೋಪಗಳನ್ನು ಪ್ರಸ್ತಾಪಿಸಿದರು. ಜತೆಗೆ, ನನ್ನ ವೈಯಕ್ತಿಕ ಜೀವನದ ಮೇಲೆ ಯಾರೂ ಆರೋಪ ಮಾಡುವಂತೆ ನಾನು ಜೀವನ ಮಾಡುತ್ತಿಲ್ಲ. ನಿಮ್ಮ ಹೊಲಸು, ವ್ಯಾಪಾರದ ದರಿದ್ರಕ್ಕೆ ನಮ್ಮನ್ನು ಏಕೆ ಸಾಯಿಸುತ್ತೀರಿ? ನಿಮ್ಮ ಸ್ವಾರ್ಥ, ಅನುಕೂಲಕ್ಕೆ ಏನು ಬೇಕಾದರೂ ಮಾಡಿಕೊಳ್ಳಿ ಎಂದು ಉಭಯಪಕ್ಷಗಳ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು.

ಸದನ ಸಹಕರಿಸದೆ ನಿಯಮಾವಳಿ ಗಾಳಿಗೆ ತೂರಿ ನಡೆದುಕೊಳ್ಳುವ ಅಗತ್ಯ ನನಗಿಲ್ಲ. ನಾವು ಇಲ್ಲಿ ಯಾರ ಬಗ್ಗೆಯೂ ಪಕ್ಷಪಾತ ಮಾಡುವುದಿಲ್ಲ. ಕೆಲ ಮಾಧ್ಯಮದಲ್ಲಿ ಒಂದು ದಿನ ಕಲಾಪ ಮುಂದೂಡಿದರೆ 12 ಕೋಟಿ ರು. ಹಣ ಪಡೆಯುತ್ತೇನೆ ಎಂದು ಬರೆಯುತ್ತಿದ್ದಾರೆ. ನನ್ನ ಕುಟುಂಬ ಇದನ್ನು ನೋಡುತ್ತಿದೆ. ನನ್ನ ಬಗ್ಗೆ ಆರೋಪ ಮಾಡುವ ಮೊದಲು ನೂರು ಸಲ ಹಿಂತಿರುಗಿ ನಿಮ್ಮ ಇತಿಹಾಸ ನೋಡಿಕೊಳ್ಳಿ ಎಂದು ಕೋಪೋದ್ರಿಕ್ತರಾಗಿ ಹೇಳಿದರು.

ಇಂತಹ ಲಕ್ಷ ಆಪಾದನೆ ಬಂದರೂ ಮೆಟ್ಟಿ ನಿಲ್ಲುವಂತಹ ಶಕ್ತಿಯನ್ನು ನನ್ನ ತಂದೆ ಹಾಗೂ ತಾಯಿ ಜನ್ಮತಃ ನೀಡಿದ್ದಾರೆ. ನನ್ನ ಬಗ್ಗೆ ಆರೋಪ ಮಾಡುವವರು ಹೊಟ್ಟೆಗೆ ಏನು ತಿಂತಾರೆ? ನಾನು ಮನೆಯ ಬಳಿ ಸರ್ಕಾರದ ಫಲಕ ಕೂಡ ಹಾಕಿಕೊಂಡಿಲ್ಲ. ಕಾರಿಗೆ ಸರ್ಕಾರದ ಗೂಟ ಕೂಡ ಕಿತ್ತು ಹಾಕಿಸಿದ್ದೇನೆ. ನೀವು ಈ ರೀತಿ ಬದುಕುವುದಲ್ಲದೇ ನಮ್ಮನ್ನೂ ಏಕೆ ಅಪರಾಧಿ ಮಾಡುತ್ತೀರಿ ಎಂದು ಪ್ರಶ್ನಿಸಿದರು.

2